ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 08-07-2022 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿ-ಹಗದೂರು ಇಲ್ಲಿ ಶ್ರೀ.ಸಿ.ಶ್ರೀಧರ್, ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

<u>ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ</u>

1. ಶ್ರೀ.ಸಿ.ಶ್ರೀಧರ್, ಸಹಾಯಕ ಕಾರ್ಯಪಾಕ ಅಭಿಯಂತರರು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಶಶಿಧರ್, ಸಹಾಯಕ ಕಾರ್ಯಪಾಕ ಅಭಿಯಂತರರು, ರ.ಮೂ.ಭೂ.ಸೌ_ಬಿಬಿಎಂಪಿ.
3. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
4. ಡಾ|| ಸನಾ, ವೈಧ್ಯಾಧಿಕಾರಿಗಳು ಹಗದೂರು ಆರೋಗ್ಯ ಕೇಂದ್ರ
5. ಡಾ|| ಸುಮತಿ, ವೈಧ್ಯಾಧಿಕಾರಿಗಳು ಸಿದ್ದಾಪುರ ಆರೋಗ್ಯ ಕೇಂದ್ರ
6. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
7. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
8. ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, (ರ.ಮೂ.ಭೂ.ಸೌ_ಬಿಬಿಎಂಪಿ)
9. ಹಗದೂರು ವಾರ್ಡಿನ ಶಕ್ತಿ ಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಹಗದೂರು ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಹಾಗೂ ಹೊರ ರೋಗಿಗಳಿಗೆ ಗಮನ ಹರಿಸದಿರುದರ ಬಗ್ಗೆ ದೂರು ನೀಡಿ, ಇವರುಗಳನ್ನು ಬದಲಾಯಿಸಲು ಸಾರ್ವಜನಿಕರು ಕೋರಿದರು.

3. ನಾಗೊಂಡನಹಳ್ಳಿ ಮತ್ತು ಇಮ್ಮಡಿಹಳ್ಳಿ ಮುಖ್ಯರಸ್ತೆಗಳಲ್ಲಿ ಪೈಪ್‌ಲೈನ್ ರಿಪೇರಿ ಮಾಡುವುದು.

4. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿಯನ್ನು ಸಿಂಪಡಿಸಲು ಕೋರಿದರು.

5. ರಾಮಗೊಂಡನಹಳ್ಳಿ ವ್ಯಾಪ್ತಿಯ ಚರಂಡಿಗಳಲ್ಲಿನ ಹೂಳು ಮತ್ತು ಮಣ್ಣನ್ನು ತೆಗೆಯಲು (ಡಿಸಿಲ್ಟ್) ಕೋರಿದರು.

6. ನಾಗೊಂಡನಹಳ್ಳಿ ಕಾಲೋನಿ ಮತ್ತು ರಾಮಮಂದಿರ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಚರಂಡಿಗಳ ಮೇಲೆ ಸ್ಲಾಬ್ ಅಳವಡಿಸಲು ಕೋರಿದರು.

7. ಇಮ್ಮಡಿಹಳ್ಳಿ ಸ್ಮಶಾಣ ಜಮೀನನ್ನು ಸರ್ವೆ ಮಾಡಿಸಲು ಕೋರಿದರು.

8. ಹಗದೂರು ಮತ್ತು ಇಮ್ಮಡಿಹಳ್ಳಿ ಮುಖ್ಯರಸ್ತೆಗಳ ಚರಂಡಿಗಳಲ್ಲಿನ ಹೂಳು ಮತ್ತು ಮಣ್ಣನ್ನು (ಡಿಸಿಲ್ಟ್) ತೆಗೆಯುವುದು.

Scanned with OKEN Scanner

ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು.

ಹಗದೂರು ವಾರ್ಡ ನಂ:84ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ **ಶ್ರೀ.ಸಿ.ಶ್ರೀಧರ್,** ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೊಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ನಂ: 84 ಹಗದೂರು

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned with OKEN Scanner